

## 3ಡಿ ವರ್ಚುವಲ್ ಇಮರ್ಸಿವ್ ರಿಯಾಲಿಟಿ ಥೆರಪಿ

ಆಟಿಸಂ, ಸೆರೆಬ್ರಲ್ ಪಾಲ್ಸಿಯಂತಹ ಆರೋಗ್ಯ ಸಮಸ್ಯೆಗಳಿಗೆ ಅತ್ಯಾಧುನಿಕ ಚಿಕಿತ್ಸೆಯನ್ನು ನೀಡಬೇಕಾಗಿದೆ. ಇದಕ್ಕಾಗಿ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ 'ಪರಿಜ್ಮ'ದಲ್ಲಿ ಇಮರ್ಸಿವ್ ರಿಯಾಲಿಟಿ ಚಿಕಿತ್ಸಾ ಕೇಂದ್ರವನ್ನು ಹೊಸದಾಗಿ ಆರಂಭಿಸಲಾಗಿದೆ. ಇಲ್ಲಿ ಮಕ್ಕಳು ನಿಜ ಜೀವನದಲ್ಲಿ ತಾವು ಕಲಿಯದೇ ಇರುವಂತಹ ಸಂವಹನ ಕೌಶಲ್ಯವನ್ನು 3ಡಿ ತಂತ್ರಜ್ಞಾನದ ಮೂಲಕ ಕಲಿಯಬಹುದು. ಮಕ್ಕಳ ಬುದ್ಧಿಮತ್ತೆಗೆ ಅನುಗುಣವಾಗಿ, ಮಕ್ಕಳಲ್ಲಿ ಧೈರ್ಯ ಬೆಳೆಸುವ ನಿಟ್ಟಿನಲ್ಲಿ ಸೂಕ್ತ ವಾತಾವರಣವನ್ನು ಇಲ್ಲಿ ನಿರ್ಮಿಸಲಾಗಿದೆ. ಇಂತಹ ಸೌಲಭ್ಯ ಹೊಂದಿರುವ ದೇಶದಲ್ಲೇ ಮೊದಲ ಚಿಕಿತ್ಸಾ ಕೇಂದ್ರ ಇದಾಗಿದೆ. ಕಳೆದ 10 ವರ್ಷಗಳಲ್ಲಿ 8200ಕ್ಕೂ ಹೆಚ್ಚಿನ ಆಟಿಸಂ ಸಮಸ್ಯೆ ಇದ್ದ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ ಎಂಬುದು 'ಪರಿಜ್ಮ'ದ ಹೇಳಿಕೆ.

'ಮಕ್ಕಳ ಮಾನಸಿಕ ಬೆಳವಣಿಗೆಗೆ ಪೂರಕವಾಗುವ ಚಿಕಿತ್ಸೆಯನ್ನು ಪರಿಜ್ಮದಲ್ಲಿ ನೀಡಲಾಗುತ್ತಿದೆ. ಕಳೆದ 30 ವರ್ಷಗಳಿಂದ ಇಲ್ಲಿ ಮಕ್ಕಳ ನ್ಯೂರಾಲಜಿ ಸಂಬಂಧಿತ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ದೇಶದಲ್ಲೇ ಮೊದಲ ಬಾರಿಗೆ 'ಅಖಿಲ್ ತ್ರಿಡಿ ವರ್ಚುಯಲ್ ಇಮರ್ಸಿವ್ ರಿಯಾಲಿಟಿ ಥೆರಪಿ ಕೇಂದ್ರ'ವನ್ನು ಸ್ಥಾಪಿಸಲಾಗಿದೆ. ನ್ಯೂರೊ ಡೆವಲಪ್‌ಮೆಂಟಲ್ ಡಿಸಾರ್ಡರ್ ಹೊಂದಿರುವ ಮಕ್ಕಳ ಚಿಕಿತ್ಸೆಯಲ್ಲಿ ಕ್ರಾಂತಿಕಾರಿ ಚಿಕಿತ್ಸಾ ವಿಧಾನ ಇದಾಗಿದೆ' ಎನ್ನುತ್ತಾರೆ ಮಕ್ಕಳ ನರರೋಗ ತಜ್ಞ ಡಾ. ಸುಧೀಂದ್ರ ಆರೂರ್.

ಸಮಸ್ಯೆ ಇದ್ದರೆ ಮಕ್ಕಳಲ್ಲಿ ಕಂಡುಬರುವ ಸಾಧ್ಯತೆ ಅಧಿಕ. ಜೀವನಶೈಲಿಯ ಬದಲಾವಣೆ, ಸಾತ್ವಿಕ ಆಹಾರ ಸೇವಿಸದಿರುವುದು, ವಾತಾವರಣದಲ್ಲಿ ಹೊಗೆ, ದೂಳು, ವಿಷಯುಕ್ತ ಪದಾರ್ಥ ಸೇರಿದ್ದನ್ನು ಮಕ್ಕಳು ಉಸಿರಾಡುವುದು ಕೂಡ ಆಟಿಸಂಗೆ ಕಾರಣಗಳಾಗುತ್ತವೆ. ಮಹಿಳೆ ನಲವತ್ತು ವರ್ಷ ದಾಟಿದ ಮೇಲೆ ಗರ್ಭ ಧರಿಸಿ ಹೆರಿಗೆಯಾಗುವುದು ಕೂಡ ಈ ಸಮಸ್ಯೆಗೆ ಮೂಲ ಎನ್ನುತ್ತದೆ ಅಧ್ಯಯನ.

ಇವೆಲ್ಲದರ ಜೊತೆಗೆ ಅವಧಿಪೂರ್ವ ಮಗುವಿನ ಜನನ, ಮಗುವಿನ ಆರೈಕೆ ಸರಿಯಾಗಿಲ್ಲದಿರುವುದು, ಗರ್ಭಾವಸ್ಥೆಯಲ್ಲಿ ಆ್ಯಂಟಿಬಯಾಟಿಕ್ ಹೆಚ್ಚಾಗಿ ಸೇವಿಸಿರುವುದು ಕೂಡ ಹುಟ್ಟಿದ ಮಗುವಿನಲ್ಲಿ ಆಟಿಸಂ ಲಕ್ಷಣ ಕಾಣಿಸಿಕೊಳ್ಳಲು ಕಾರಣವಾಗುತ್ತದೆ.

### ಆಟಿಸಂ ಮಕ್ಕಳ ಪತ್ತೆ ಹೇಗೆ?

ಸಾಮಾನ್ಯವಾಗಿ ಮಕ್ಕಳ ಚಟುವಟಿಕೆ ಹುಟ್ಟಿದ ನಂತರ ಆಯಾಯ ತಿಂಗಳಿಗೆ, ವರ್ಷಕ್ಕೆ ಹೀಗೇ ಇರುತ್ತದೆ ಎಂಬ ವೈದ್ಯ ನಿಯಮವಿದೆ. ಆದರೆ ಮಕ್ಕಳು ಚಿಕ್ಕವಯಸ್ಸಿನಲ್ಲಿ ಸರಿಯಾಗಿ ಸ್ಪಂದಿಸದೆ ಇದ್ದಾಗ, ಪ್ರತಿಕ್ರಿಯೆ ತೋರದೇ ಇದ್ದಾಗ, ಆಟವಾಡಲು ಆಸಕ್ತಿ ತಳೆಯದೇ ಇದ್ದಾಗ, ಮಗುವಿನ ನೋಟದಲ್ಲಿ ಭಿನ್ನತೆ ಕಂಡುಬಂದಾಗ, ಇದ್ದಕ್ಕಿದ್ದಂತೆ ಮಗು ಹಟ ಮಾಡಲು ತೊಡಗಿದಾಗ... ಇಂತಹ ಲಕ್ಷಣಗಳು ಕಂಡುಬಂದರೆ ಮಗುವಿನ ಆಟಿಸಂ ಸಮಸ್ಯೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ತಕ್ಷಣ ಮಗುವನ್ನು ತಜ್ಞ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಕೊಡಿಸಬೇಕು.

### ಚಿಕಿತ್ಸೆ ಏನು?

ಮಗು ಹುಟ್ಟಿ ಆರಂಭದ ತಿಂಗಳುಗಳಲ್ಲಿ ಹೆಚ್ಚಿನ ನಿದ್ದೆಯಲ್ಲೇ ಕಳೆಯುವುದರಿಂದ ಮಗುವಿನ ಚಟುವಟಿಕೆ ಅಷ್ಟಾಗಿ ಗೊತ್ತಾಗದು. ಎರಡು ತಿಂಗಳ ಬಳಿಕ ಮಗು ತಾಯಿಯ ಮಾತು, ನಗು ಮುಂತಾದವುಗಳಿಗೆ ಸ್ಪಂದಿಸಲಾರಂಭಿಸುತ್ತದೆ. ಆ ಬಳಿಕ ಮಗು ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗುತ್ತದೆ. ಒಂದು ವೇಳೆ ಮಗು ನಿತ್ಯ ಮಂಕಾಗಿದ್ದು, ಯಾವುದೇ ರೀತಿಯ ಸ್ಪಂದನೆ ಇಲ್ಲದಿದ್ದರೆ ಮಗುವಿನಲ್ಲಿ ಸಮಸ್ಯೆ ಇದೆ ಎಂಬುದು ಮೇಲ್ನೋಟಕ್ಕೇ ಸಾಬೀತಾಗುತ್ತದೆ. ಆಗ ಮನೋವೈದ್ಯರ ಸಲಹೆಯನ್ನು ಪಡೆದುಕೊಳ್ಳಬೇಕು.

'ಆಟಿಸಂ ಹಾಗೂ ಬುದ್ಧಿಮತ್ತೆ ಬೆಳವಣಿಗೆಯಲ್ಲಿ ತೊಂದರೆ ಎದುರಿಸುತ್ತಿರುವ ಮಕ್ಕಳ ಸಂಖ್ಯೆ ಈಗೀಗ ಗಣನೀಯವಾಗಿ ಹೆಚ್ಚಾಗುತ್ತಿದೆ. ಕಳೆದೊಂದು ದಶಕದಲ್ಲಿ ಈ ಪ್ರಮಾಣ ಶೇ. 300ರಷ್ಟು ಹೆಚ್ಚಾಗಿದೆ' ಎಂದು ವಿವರ ನೀಡುತ್ತಾರೆ 'ಪರಿಜ್ಮ' ಮೆಡಿಕಲ್ ಸೆಂಟರ್‌ನ ಮುಖ್ಯಸ್ಥ ಹಾಗೂ ಮಕ್ಕಳ ನ್ಯೂರಾಲಜಿಸ್ಟ್ ಆಗಿರುವ ಡಾ. ಸುರೇಶ್ ರಾವ್ ಅರೂರ್.

'ಮಗುವಿನಲ್ಲಿ ಆಟಿಸಂ ಸಮಸ್ಯೆ ಇದೆ ಎಂದು ಗುರುತಿಸಲ್ಪಟ್ಟರೆ ಪೋಷಕರು ತಾಳ್ಮೆಯಿಂದ ನಿಭಾಯಿಸಬೇಕು. ಮಗು ಸಾಮಾಜಿಕವಾಗಿ ಬೆರೆಯಲು ಪ್ರೋತ್ಸಾಹ ಕೊಡಬೇಕು. ಮಗುವಿನಲ್ಲಿ ಸಂವಹನ ಕೌಶಲ್ಯ ಹೆಚ್ಚಲು ಪ್ರಾಣಿ, ಪಕ್ಷಿಗಳ ಚಿತ್ರ ತೋರಿಸುವುದು, ಆಂಗಿಕ ಭಾಷೆಯ ಮೂಲಕ ಮಾತನಾಡುವುದು, ಖುಷಿಯಾಗಿರುವಂತೆ ನೋಡಿಕೊಂಡರೆ ಮಗುವಿನಲ್ಲಿ ಸಂವಹನ ಕಲೆ ವೃದ್ಧಿಯಾಗುತ್ತದೆ. ವಿಡಿಯೊ ಮೂಲಕ ದೃಶ್ಯಗಳನ್ನು ತೋರಿಸಿ ಅವುಗಳನ್ನು ವಿವರಿಸಿದರೆ ಮಗು ಸ್ಪಂದಿಸಲಾರಂಭಿಸುತ್ತದೆ, ಬುದ್ಧಿಮತ್ತೆಯ ವಿಕಸನವೂ ಆಗುತ್ತದೆ' ಎಂದು ಹೇಳುತ್ತಾರೆ ಮಕ್ಕಳ ನ್ಯೂರಾಲಜಿಸ್ಟ್ ಡಾ. ಸುಧೀಂದ್ರ ಅರೋರ.



ಈಗೀಗ ವಿಶ್ವದಾದ್ಯಂತ ಅಲ್ಲದೆ ನಮ್ಮ ದೇಶದಲ್ಲಿ ಆಟಿಸಂ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ವಿಶ್ವದಾದ್ಯಂತ 2004ರಲ್ಲಿ 166 ಮಕ್ಕಳಲ್ಲಿ ಒಂದು ಮಗುವಿಗೆ ಆಟಿಸಂ ಸಮಸ್ಯೆ ಇತ್ತು. 2020ರಲ್ಲಿ ಈ ಪ್ರಮಾಣ ಗಣನೀಯವಾಗಿ ಹೆಚ್ಚಿದ್ದು ಆಟಿಸಂ ಸಮಸ್ಯೆ ತೀವ್ರವಾಗುತ್ತಿರುವುದು ಕಳವಳಕಾರಿ ಅಂಶ.

ಅಂದ ಹಾಗೆ ಪ್ರತೀವರ್ಷ ಏಪ್ರಿಲ್ 2ನ್ನು 'ವಿಶ್ವ ಆಟಿಸಂ ಡೇ' ಎಂದು ಆಚರಿಸಲಾಗುತ್ತಿದ್ದು, ಆಟಿಸಂ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸುವುದೇ ಈ ಆಚರಣೆಯ ಹಿಂದಿನ ಉದ್ದೇಶ. ■